# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 50 ಫಾ.ಸಾ. : 29**

| | | |
|---|---|---|
| ಸಾಕ್ಷಿಯ ಹೆಸರು | : | ಗೋಪಾಲ ನಾಗಪ್ಪ ಜೋಗಳೆಕರ್ |
| ತಂದೆಯ ಹೆಸರು | : | ನಾಗಪ್ಪ ಜೋಗಳೆಕರ್ |
| ವಯಸ್ಸು | : | 67 ವರ್ಷ |
| ಕೆಲಸ | : | ನಿವೃತ್ತ ಪಿ.ಎಸ್.ಐ |
| ವಾಸ | : | ಜೋಗ, ತಾಃ ಸಾಗರ |

**ದಿನಾಂಕಃ 12-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. 2008 ರಿಂದ 2016 ರ ವರೆಗೆ ನಾನು ಕದ್ರಾ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 14-02-2014 ರಂದು ನಾನು ಕರ್ತವ್ಯ ನಿರ್ವಹಿಸಿ, ವಿಶ್ರಾಂತಿ ಪಡೆಯಲು ಮನೆಗೆ ಹೋಗಿದ್ದು, ರಾತ್ರಿ 11-15 ಗಂಟೆ ಸಮಯದಲ್ಲಿ ನಮ್ಮ ಕದ್ರಾ ಪೋಲಿಸ್ ಠಾಣೆಯ ಠಾಣಾಧಿಕಾರಿಯು ಕರೆ ಮಾಡಿ, ರಾಜೀವ ನಗರದ ಎರಡು ಜನರು ಠಾಣೆಗೆ ಬಂದು, ವೇಲು ಇಲ್ಲನ್ ಗುಡಿಯವರ ಮನೆಯಲ್ಲಿ ಆತನ ಮಗಳು ಅಶ್ವಿನಿಯನ್ನು ಯಾರೋ ಕೊಲೆ ಮಾಡಿರುತ್ತಾರೆ, ಆದ್ದರಿಂದ ನೀವು ಕೂಡಲೇ ರಾಜೀವ ನಗರಕ್ಕೆ ಹೋಗಿ, ವೇಲು ಇಲ್ಲನ್ ಗುಡಿಯವರ ಮನೆಯ ಬಳಿ ಹೋಗಿ ಎಂದು ತಿಳಿಸಿದ್ದು, ಅದರಂತೆ ನಾನು ವೇಲು ಇಲ್ಲನ್ ಗುಡಿಯವರ ಮನೆಯ ಬಳಿ ಹೋದಾಗ, ಈಗಾಗಲೇ ನಮ್ಮ ಠಾಣೆಯ ಪಿ.ಎಸ್.ಐ ರವರು ಬಂದಿರುತ್ತಾರೆ ಹಾಗೂ ವೇಲು ಇಲ್ಲನ್ ಗುಡಿಯವರ ಮನೆಯ ಒಳಗೆ ಆತನ ಮಗಳಾದ ಅಶ್ವಿನಿಯ ಶವ ಬಿದ್ದಿರುತ್ತದೆ ಹಾಗೂ ಆತನ ಹೆಂಡತಿಯ ಎಡಗೈ ತುಂಡಾಗಿದ್ದು, ತಲೆಗೆ ಕತ್ತರಿಸಿದ ಗಾಯವಾಗಿರುತ್ತದೆ. ಆ ನಂತರ ನಮ್ಮ ಪಿ.ಎಸ್.ಐ ರವರು ನನಗೆ ಹಾಗೂ ನಮ್ಮ ಠಾಣಾ ಸಿಬ್ಬಂದಿಯಾದ ಚಾಸಾ-51 ರವರಿಗೆ ಗಾಯಾಳು ಜಾನಕಿಯನ್ನು ಹಾಗೂ ಆಕೆಯ ತುಂಡಾಗಿದ್ದ ಎಡೆಗೈಯನ್ನು ತೆಗೆದುಕೊಂಡು, ಇಲಾಖಾ ಜೀಪ್ ನಲ್ಲಿ ಕದ್ರಾದ ಕೆ.ಪಿ.ಸಿ. ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿರುತ್ತಾರೆ. ಅದರಂತೆ ನಾನು ಹಾಗೂ ಚಾಸಾ-51 ರವರು

ಜಾನಕಿಯನ್ನು ಹಾಗೂ ಆಕೆಯ ತುಂಡಾದ ಕೈಯನ್ನು ತೆಗೆದುಕೊಂಡು ಹೋಗಿರುತ್ತೇವೆ. ಅಲ್ಲಿ ವೈದ್ಯರು ಗಾಯಳು ಜಾನಕಿಗೆ ಪ್ರಥಮ ಚಿಕಿತ್ಸೆ ಮಾಡಿ, ಹೆಚ್ಚಿನ ಚಿಕಿತ್ಸೆಗಾಗಿ ಕಾರವಾರದ ಸಿವಿಲ್ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿರುತ್ತಾರೆ. ನಂತರ ನಾವು ಅಲ್ಲಿಗೆ ಬಂದಿದ್ದ ಅಂಬ್ಯುಲೇನ್ಸ ನಲ್ಲಿ ಜಾನಕಿ ಹಾಗೂ ಆಕೆಯನ್ನು ಕೈಯನ್ನು ತೆಗೆದುಕೊಂಡು ಬಂದು ಆಸ್ಪತ್ರೆಗೆ ದಾಖಲಿಸಿರುತ್ತೇವೆ. ಆಕೆಯನ್ನು ಪರೀಕ್ಷಿಸಿದ ಕಾರವಾರದ ಸಿವಿಲ್ ಆಸ್ಪತ್ರೆಯ ವೈದ್ಯರು ನಮಗೆ ಜಾನಕಿಯನ್ನು ಗೋವಾದ ಬಾಂಬೊಲಿಯಂ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದ ಮೇರೆಗೆ ನಾನು ಹಾಗೂ ಚಾಸಾ-51 ರವರು ಜಾನಕಿಯನ್ನು ಖಾಸಗಿ ಅಂಬ್ಯುಲೇನ್ಸ ಮೂಲಕ ದಿಃ 15-02-2014 ರ ಬೆಳಗಿನ ಜಾವ 03-00 ರಿಂದ 04-00 ಗಂಟೆ ಸಮಯಕ್ಕೆ ಗೋವಾದ ಬಾಂಬೊಲಿಯಂ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿರುತ್ತೇವೆ.

2. ಮರುದಿನ ಅಂದರೆ ದಿಃ 16-02-2014 ರಂದು ಆಸ್ಪತ್ರೆಯ ವೈದ್ಯರು ನಮಗೆ ಜಾನಕಿಯಮ್ಮೆ ಮೇಲೆ ಇದ್ದ ಬಟ್ಟೆಗಳಾದ ಒಂದು ಉದ್ದ ತೋಳಿನ ಸ್ವೆಟರ್, ಒಂದು ನೀಲಿ ಬಾರ್ಡರಿನ ಸೀರೆ, ಒಂದು ಬ್ಲೌಸ್ ಮತ್ತು ಒಂದು ಲಂಗವನ್ನು ನೀಡಿದ್ದು, ಸದರಿ ಬಟ್ಟೆಗಳಿಗೆ ರಕ್ತ ತಾಗಿದ್ದು, ನಾವು ಅವುಗಳನ್ನು ಪೇಪರ್ ನಲ್ಲಿ ಪ್ಯಾಕ್ ಮಾಡಿ, ಕದ್ರಾ ಪೊಲೀಸ್ ಠಾಣೆಯ ಸಿ.ಪಿ.ಐ ರವರಿಗೆ ನೀಡಿರುತ್ತೇವೆ. ಆಗ ಸಿ.ಪಿ.ಐ ರವರು ಪಂಚರಾದ ಚಾಸಾ-18 ಮತ್ತು 19 ರವರನ್ನು ಠಾಣೆಗೆ ಪಂಚರನ್ನಾಗಿ ಕರೆಯಿಸಿ, ಬೆಳಿಗ್ಗೆ 11-00 ರಿಂದ 12-00 ಗಂಟೆಯ ವರೆಗೆ ಜಪ್ತು ಪಂಚನಾಮೆಯನ್ನು ಜರುಗಿಸಿ, ಸದರಿ ಬಟ್ಟೆಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಹಾಕಿ, ಸೀಲ್ ಮಾಡಿ, ಜಪ್ತುಪಡಿಸಿಕೊಂಡಿರುತ್ತಾರೆ. ಸದರಿ ಬಟ್ಟೆ ಜಪ್ತು ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-45 ಎಂದು ಗುರುತಿಸಲಾಗಿರುತ್ತದೆ. ಈಗ ನ್ಯಾಯಾಲಯದ ಮುಂದೆ ಇರುವ ಜಾನಕಿಯ ಬಟ್ಟೆಗಳಾದ ಸ್ವೆಟರ್, ಸೀರೆ, ಬ್ಲೌಸ್ ಮತ್ತು ಲಂಗವನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು-30 ರಿಂದ 33 ಎಂದು ಗುರುತಿಸಲಾಗಿರುತ್ತದೆ. ಈ ಬಗ್ಗೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ**

3. ನಾನು ವೇಲು ಇಲ್ಲನ್ ಗುಡಿಯವರ ಮನೆಯ ಹತ್ತಿರ ಹೋದಾಗ, ಅಲ್ಲಿ ಬಹಳಷ್ಟು ಜನರು ಸೇರಿದ್ದರು. ನಾನು ಸ್ಥಳಕ್ಕೆ ಹೋದಾಗ, ಅಲ್ಲಿ ಸೇರಿದ್ದ ಜನರ ಬಳಿ ಪಿ.ಎಸ್.ಐ ರವರು

ವಿಚಾರಣೆ ಮಾಡುತ್ತಿದ್ದರು. ಮುದ್ದೆ ಮಾಲು–30 ಸ್ವೆಟರ್ ನ ಎರಡು ತೋಳಿನ ಮೇಲೆ ಕತ್ತಿಯಿಂದ ಕತ್ತರಿಸಿದ ಯಾವುದೇ ಗುರುತು ಇರುವುದಿಲ್ಲ ಎಂದರೆ ಸರಿ. ಮುದ್ದೆ ಮಾಲು–30 ರಿಂದ 33 ನಂತಹ ಬಟ್ಟೆಗಳು ಸಾಮಾನ್ಯವಾಗಿ ಎಲ್ಲಾ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಸದರಿ ಮುದ್ದೆ ಮಾಲುಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಈ ಮುದ್ದೆ ಮಾಲುಗಳನ್ನು ಚಾಸಾ–22 ರವರಿಂದ ಪಡೆದುಕೊಂಡಿರುವುದಿಲ್ಲ ಹಾಗೂ ಅವುಗಳಿಗೆ ಯಾವುದೇ ಜಪ್ತು ಪಂಚನಾಮೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಜಾನಕಿಯನ್ನು ಕದ್ರಾದ ಕೆ.ಪಿ.ಸಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ನೀರನ್ನು ಕೇಳಿರುವುದಿಲ್ಲ, ಆದರೆ ಆಕೆ ಮಾತನಾಡುವ ಸ್ಥಿತಿಯಲ್ಲಿದ್ದಳು, ಆದರೆ ಗಾಬರಿಗೊಂಡಿದ್ದಳು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ